**SINDHI HIGH SCHOOL, BENGALURU**
**ANNUAL EXAMINATION [2022-23]**
**SUBJECT: L2 KANNADA**

| | |
|---|---|
| **Class: VIII** | **Max Marks: 80** |
| **Date: 16.03.2023** | **Reading Time: 8:00 to 8:15 am** |
| **No. of Sides: 08** | **Writing Time: 8:15 to 11:15 am** |

**ಸೂಚನೆಗಳು:**

* ಪತ್ರಿಕೆಯು A ಮತ್ತುB ಎಂಬ ಎರಡು ಭಾಗಗಳನ್ನು ಒಳಗೊಂಡಿರುತ್ತವೆ.
* ಪ್ರಶ್ನೆಪತ್ರಿಕೆಯಲ್ಲಿ ಒಟ್ಟು 17 ಮುಖ್ಯಪ್ರಶ್ನೆಗಳಿರುತ್ತವೆ.
* ಪ್ರಶ್ನೆಗಳ ಸೂಚನೆಗಳನ್ನು ಸರಿಯಾಗಿ ಓದಿಕೊಂಡು ಕ್ರಮವಾಗಿ ಉತ್ತರಿಸಿ.
* ಪ್ರಶ್ನೆಮತ್ತುಉಪಪ್ರಶ್ನೆಗಳ ಸಂಖ್ಯೆಯನ್ನು ತಪ್ಪಿಲ್ಲದೆ ಬರೆಯಿರಿ.
* ಎರಡೂ ಭಾಗಗಳ ಪ್ರಶ್ನೆಗಳಿಗೂ ಉತ್ತರಿಸುವುದು ಕಡ್ಡಾಯ

| | | |
|---|---|---|
| **ಭಾಗ- A (40 ಅಂಕಗಳು)** | **ವಾಚನ ಮತ್ತು ಗ್ರಹಿಕಾಕೌಶಲ್ಯ** | **10 ಅಂಕಗಳು** |
| | **ಅನ್ವಯಿಕ ವ್ಯಾಕರಣ** | **16 ಅಂಕಗಳು** |
| | **ಬಹು ಆಯ್ಕೆ ಪ್ರಶ್ನೆಪಠ್ಯಗಳಅಧ್ಯಯನ<br>ಪಠಿತಗದ್ಯ,ಪದ್ಯ** | **10 ಅಂಕಗಳು<br>04 ಅಂಕಗಳು** |
| **ಭಾಗ- B (40 ಅಂಕಗಳು)** | **ಬರವಣಿಗೆಕೌಶಲ್ಯ** | **12 ಅಂಕಗಳು** |
| | **ಪಠ್ಯಗಳಅಧ್ಯಯನ** | **28 ಅಂಕಗಳು** |
| | **ಒಟ್ಟುಅಂಕಗಳು** | **80 ಅಂಕಗಳು** |

## ಭಾಗ-A

## ವಾಚನಾ ಮತ್ತು ಗ್ರಹಿಕಾ ಕೌಶಲ

**I.(ಅ) ಗದ್ಯಭಾಗವನ್ನು ಓದಿಕೊಂಡುಕೆಳಗಿನ ಬಹುಆಯ್ಕೆಯ ಪ್ರಶ್ನೆಗಳಿಗೆ ಉತ್ತರಿಸಿ:** **೧X೫=೫**

ಸತ್ಯಾಗ್ರಹವು ಒಂದು ಪ್ರಬಲವಾದ ಅಸ್ತ್ರ.ಅದನ್ನು ಜೀವನದ ಎಲ್ಲಾ ಕ್ಷೇತ್ರಗಳಲ್ಲಿಯೂ ಉಪಯೋಗಿಸಬಹುದು. ನಮ್ಮ ವೈರಿಗಳು, ಮಿತ್ರರು, ಸಂಬಂಧಿಕರು, ಅಪರಿಚಿತರು, ವ್ಯಕ್ತಿಗಳು ಅಥವಾ ಸಂಸ್ಥೆಗಳು – ಹೀಗೆ ಯಾರೇ ಆಗಲಿ ನಮಗೆ ಅನ್ಯಾಯ ಮಾಡಿದರೆ, ಈ ಅಸ್ತ್ರವನ್ನು ಅಹಿಂಸಾತ್ಮಕ ರೀತಿಯಲ್ಲಿ ಬಳಸಬಹುದು ಎಂದು ಗಾಂಧೀಜಿಯವರು ಸಾರಿ ಸಾರಿ ಹೇಳಿದ್ದಾರೆ.

ಗುಜರಾತ ಪ್ರಾಂತದ ಖೇಡಾ ಜಿಲ್ಲೆಗೆ ಸೇರಿದ ಧರ್ಮಜ ಎಂಬ ಹಳ್ಳಿಯಲ್ಲಿ ನಡೆದ ಸತ್ಯಾಗ್ರಹ ಇದಕ್ಕೆ ಒಂದು ಉದಾಹರಣೆಯಾಗಿದೆ. ಒಂದು ಹಳೆಯ ರೂಢಿಯನ್ನು ಹೋಗಲಾಡಿಸಲು ಯುವಕರು ಇದನ್ನು ಹೂಡಿದ್ದರು.

ಆ ಊರಿನ ಒಬ್ಬ ಪ್ರಮುಖ ನಾಗರಿಕನು ತನ್ನ ತಾಯಿ ಸತ್ತ ಹನ್ನೆರಡನೆಯ ದಿನ ಊರಿಗೆಲ್ಲ ಒಂದು ಊಟವನ್ನು ಹಾಕಬೇಕೆಂದು ಯೋಚನೆ ಮಾಡಿದ್ದನು.ಈ ಹಳೆಯ ಅರ್ಥರಹಿತ ರೂಢಿಯನ್ನು ನಿಲ್ಲಿಸಬೇಕೆಂದು ಅಲ್ಲಿಯ ತರುಣರು ನಿರ್ಧರಿಸಿದರು.ಒಳ್ಳೆಯ ಮಾತಿನಿಂದ ಆ ನಾಗರಿಕರ ಮನವೊಲಿಸಲು ಯತ್ನಿಸಿದರು. ಅದು ಯಶಸ್ವಿಯಾಗಲಿಲ್ಲ. ಆಗ ಎಲ್ಲ ತರುಣರು ಕೂಡಿ ಆ ಸಮಾರಂಭದಲ್ಲಿತಾವು ಭಾಗವಹಿಸಬಾರದೆಂದೂ, ಅಲ್ಲಿಯ ಆಹಾರಕ್ಕೆ ಕೈಹಚ್ಚಬಾರದೆಂದೂ , ಆ ದಿನವಿಡೀ ಉಪವಾಸವಿರಬೇಕೆಂದೂ ನಿರ್ಧರಿಸಿದರು. ಹೀಗೆ ಮಾಡಿದಾಗ ಹಿರಿಯರು ತಮಗೆ ಏನಾದರೂ ಶಿಕ್ಷೆ ಕೊಟ್ಟರೆ ಶಾಂತವಾಗಿ ಸಹಿಸಬೇಕೆಂದು ನಿರ್ಣಯಿಸಿದರು.ಇದರಿಂದ ಉತ್ತಮ ಪರಿಣಾಮವೇ ಆಯಿತು. ಊರಿನ ಊಟದ ದಿವಸ ಸುಮಾರು ಮುನ್ನೂರು ವಿದ್ಯಾರ್ಥಿಗಳು ಹಾಗೂ ಚಿಕ್ಕಮಕ್ಕಳು ಉಪವಾಸ ಮಾಡಿಯೇಬಿಟ್ಟರು. ಹಿರಿಯರು ಬಹಳ ಸಿಟ್ಟಾದರು. ಆದರೆ ತಮ್ಮ ಮಕ್ಕಳು ಯಾವ ಶಿಕ್ಷೆಗೂ ತಯಾರಾಗಿರುವುದನ್ನು ನೋಡಿ, ಅವರಿಗೆ ಶಿಕ್ಷೆ ಕೊಡಲು ಮನಸ್ಸಾಗಲಿಲ್ಲ. ಅಲ್ಲದೆ ಅವರ ಸತ್ಯಾಗ್ರಹ ತಮ್ಮ ಹಳೆಯ ರೂಢಿಯ ವಿರುದ್ಧವೇ ಹೊರತು ತಮ್ಮ ವಿರುದ್ಧ ಅಲ್ಲವೆಂಬುದನ್ನು ತಿಳಿದುಕೊಂಡು, ತಮ್ಮ ತಪ್ಪನ್ನು ತಿದ್ದಿಕೊಂಡರು. ಈ ಸುದ್ದಿ ಗಾಂಧೀಜಿಯವರಿಗೂ ತಲುಪಿತು.ಅವರು ವಿದ್ಯಾರ್ಥಿಗಳಿಗೆ ಉತ್ತೇಜನ ಕೊಟ್ಟು ಪತ್ರ ಬರೆದರು.ಇದೇ ರೀತಿ ನಾವೂ ಕೂಡ ಶುದ್ಧವೂ ಸುಂದರವೂ ಪ್ರೇಮಮಯವೂ

ಆದ ಈ ಅಹಿಂಸೆಯ ಅಸ್ತ್ರವನ್ನು ಬದುಕಿನಲ್ಲಿ ಬಳಸಿದರೆ, ಸಮಾಜದಲ್ಲಿಯ ಹಳೆಯ ರೂಢಿಗಳು ತೊಲಗಿ ಸಮಾಜ ಅಭಿವೃದ್ಧಿಪಥದಲ್ಲಿ ಮುನ್ನಡೆಯಬಲ್ಲದು.

**ಪ್ರಶ್ನೆಗಳು**:

1. ಸತ್ಯಾಗ್ರಹದಲ್ಲಿ ಈ ಅಸ್ತ್ರವನ್ನು ಬಳಸಬಹುದಾಗಿದೆ_ಎಂದು ಗಾಂಧೀಜಿ ಹೇಳಿದ್ದಾರೆ.
   ೧. ಉಪವಾಸವನ್ನು ೨. ಸಂಸ್ಥೆಗಳನ್ನು ೩. ಅಹಿಂಸೆಯನ್ನು ೪. ಅಪರಿಚಿತರನ್ನು

2. ತಾಯಿ ಸತ್ತ ಹನ್ನೆರಡನೇ ದಿನ ಊರಿಗೆಲ್ಲಾ ಊಟ ಹಾಕುತ್ತಿದ್ದ ಹಳ್ಳಿ
   ೧. ಧರ್ಮಜ ೨. ಗುಜರಾತ್ ೩. ಖೇಡಾ ೪. ಪ್ರಾಂತ

3. ಹನ್ನೆರಡನೇ ದಿನ ಊರಿಗೆಲ್ಲಾ ಊಟ ಹಾಕುವ ಪದ್ಧತಿಯನ್ನು ನಿಲ್ಲಿಸಲು ಹೊಟ ತರುಣರ ಸಂಖ್ಯೆ
   ೧. ನೂರು ೨. ಮುನ್ನೂರು ೩. ಇನ್ನೂರು ೪ ಐನೂರು

4. ಹಳೆಯ ರೂಢಿಗಳನ್ನು ತೊಲಗಿಸಿದಾಗ ಉದ್ಧಾರವಾಗುವುದು ಇದಾಗಿದೆ.
   ೧. ಸಂಸ್ಥೆ ೨. ಸಮಾಜ ೩. ಸಂಘ ೪. ದೇಶ

5. ವಿದ್ಯಾರ್ಥಿಗಳು ಮಾಡಿದ ಸತ್ಯಾಗ್ರಹಕ್ಕೆ ಉತ್ತೇಜನವನ್ನು ಕೊಟ್ಟವರು_
   ೧. ಹಿರಿಯರು ೨. ಗಾಂಧೀಜಿ ೩. ನೆಹರು ೪. ಊರಿನ ಜನ

**ಅಥವಾ**

**ಆ) ಗದ್ಯಾಂಶವನ್ನು ಓದಿಕೊಂಡು ಕೆಳಗಿನ ಬಹುಆಯ್ಕೆ ಪ್ರಶ್ನೆಗಳಿಗೆ ಉತ್ತರಿಸಿ:** ೧X೫ = ೫

'ಛತ್ರಪತಿ ಶಿವಾಜಿ'ಯು ಅತ್ಯಂತ ಧೈರ್ಯಶಾಲಿ ಸಾಮ್ರಾಟನಾಗಿದ್ದು, ಭಾರತದಾದ್ಯಂತ ಮರಾಠ ಸಾಮ್ರಾಜ್ಯವನ್ನು ಸ್ಥಾಪಿಸಿ, ವಿಸ್ತರಿಸಿದ ಕೀರ್ತಿ ಇವರದ್ದು. ಶಿವಾಜಿ ಅವರು ತಮ್ಮ ಜೀವಿತಾವಧಿಯಲ್ಲಿ ತನ್ನ ಸಾಮ್ರಾಜ್ಯವನ್ನು ಮೊಘಲರಿಂದ ಕಾಪಾಡಿಕೊಳ್ಳಲು ಅನೇಕ ವರ್ಷಗಳ ಕಾಲ ಹೋರಾಡಿದ್ದರು. ಇನ್ನು ಕೆಲವರು ಛತ್ರಪತಿ ಶಿವಾಜಿಯನ್ನು ದೇವರೆಂದೇ ಪರಿಗಣಿಸುತ್ತಾರೆ. ದಕ್ಷಿಣ ಭಾರತದಲ್ಲಿ ಇಂದಿಗೂ ಕೂಡ ಪ್ರಾಚೀನ ಹಿಂದೂ ದೇವಾಲಯಗಳು ಅಳಿಯದೇ ಉಳಿದಿದೆಯೆಂದರೆ ಅದಕ್ಕೆ ಮುಖ್ಯ ಕಾರಣ ಛತ್ರಪತಿ ಶಿವಾಜಿಯ ನ್ಯಾಯಯುತ ಆಡಳಿತವಾಗಿದೆ.

ಮಹಾರಾಷ್ಟ್ರವನ್ನು ಆಳಿದ ಮರಾಠರ ಮಹಾವೀರನಾದ ಛತ್ರಪತಿ ಶಿವಾಜಿಯು ದಿಲ್ಲಿಯ ಮೊಘಲ ಚಕ್ರವರ್ತಿ ಔರಂಗಜೇಬನಿಗೂ , ಮೊಘಲ ಸಾಮಂತ ರಾಜರಿಗೂ 'ಸಿಂಹಸ್ವಪ್ನ'ದಂತೆ ಬೆಳೆದು ನಿಂತಿದ್ದನು. ಶಿವಾಜಿಯನ್ನು ಹಿಡಿಯಲು ಶತ್ರುಗಳು ಪಟ್ಟ ಪ್ರಯತ್ನಕ್ಕೆ ಜಯ ಸಿಗಲಿಲ್ಲ.

ಕ್ರಿ. ಶ. ೧೬೬೦ ರಲ್ಲಿ ಶಿವಾಜಿಯು ಪನ್ಹಾಲದುರ್ಗದಲ್ಲಿದ್ದನು. ಶಿವಾಜಿಯನ್ನು ಕೋಟೆಯ ಸಮೇತ ಹಿಡಿಯಬೇಕೆಂದು ಬಿಜಾಪುರ ಸುಲ್ತಾನನು ಸಲಾಬತ್ ಖಾನನನ್ನು ಸೇನೆಯೊಂದಿಗೆ ಕಳುಹಿಸಿದನು. ಕೋಟೆಗೆ ಮುತ್ತಿಗೆ ಹಾಕಿದರೂ ಅದನ್ನು ಆಕ್ರಮಿಸಲು ಆಗಲಿಲ್ಲ. ಶತ್ರುಗಳು ಕೋಟೆಯ ಹೊರಗಡೆಯೇ ಕಾಯುತ್ತಿದ್ದರು.

ಒಂದು ದಿನ ಶಿವಾಜಿ ಕಡೆಯವರು ಬಿಳಿಯ ಬಾವುಟವನ್ನು ಹಿಡಿದುಕೊಂಡು ಕೋಟೆಯ ಹೊರಗೆ ಬಂದು "ಯಾವ ಷರತ್ತಿನ ಮೇಲೆ ಕೋಟೆಯ ಆಕ್ರಮಣವನ್ನು ನಿಲ್ಲಿಸಿ ಹಿಂದೆಗೆಯುವಿರಿ?" ಎಂದು ಸಲಾಬತ್ ಖಾನನು ಕೇಳಿದರು. ಹೀಗೆ ಚರ್ಚಿಸುತ್ತಿದ್ದಾಗ, ಶಿವಾಜಿಯು ಮುದುಕನ ವೇಷದಲ್ಲಿ ಕೆಲವು ಮಂದಿ ವೀರ ಅನುಚರರೊಂದಿಗೆ ಕೋಟೆಯ ಹಿಂದಿನ ದ್ವಾರದ ಮೂಲಕ ಹೊರಬಿದ್ದನು. ಅವರಿಗಾಗಿ ಸ್ವಲ್ಪ ದೂರದಲ್ಲಿ ಕುದುರೆಗಳೂ ಸಿದ್ಧವಾಗಿದ್ದವು.

ಶಿವಾಜಿಯೂ ಅವನ ಅನುಚರರು ತಮ್ಮ ಮಾರುವೇಷವನ್ನು ಕಳಚಿ ಕುದುರೆಯನ್ನೇರುವಾಗ ಒಬ್ಬ ಶತ್ರು ಗೂಢಾಚಾರಿ ನೋಡಿ ತಕ್ಷಣ ಸಲಾಬತ್ ಖಾನನಿಗೆ ಸುದ್ದಿ ಮುಟ್ಟಿಸಿದನು. ಆದರೆ ಶಿವಾಜಿಯು ಪರಾಕ್ರಮಿಯು ಚಾಣಕ್ಯನು ಆದ ಕಾರಣ ಅವರಿಗೆ ಸಿಗಲಿಲ್ಲ .

ಶಿವಾಜಿಯ ಜೊತೆ ಬಾಜೀಪ್ರಭು ಎಂಬ ವೀರನೂ , ವಿಶ್ವಾಸಿಯೂ ಆದ ಸ್ನೇಹಿತನಿದ್ದನು. ಅವನು ಶಿವಾಜಿಯನ್ನು ಶತ್ರು ಸೈನ್ಯದಿಂದ ತಪ್ಪಿಸಲು ವಿಶಾಲ್ ಗಢ್ ಎಂಬ ದುರ್ಗಕ್ಕೆ ಹೋಗಲು ಒಪ್ಪಿಸಿದನು. ಅನಂತರ ಬಾಜೀ ಪ್ರಭು ತಾನೆ ಶತ್ರು ಸೈನ್ಯದ ಜೊತೆ ಹೋರಾಡಿ ಅವರನ್ನು ಹಿಮ್ಮೆಟ್ಟಿಸಿದನು.

ಈ ಯುದ್ಧದಲ್ಲಿ ಬಾಜೀ ಪ್ರಭು ವಿಜಯಿಯಾದನು . ಆದರೆ ತೀವ್ರತರನಾದ ಗಾಯಗಳಿಂದ ಪ್ರಾಣ ಬಿಟ್ಟನು ಅಂದಿನ ಬಾಜೀ ಪ್ರಭುವಿನ ನೆರವಿನಿಂದ ಶಿವಾಜಿಯು ಶತ್ರುಗಳಿಂದ ಪಾರಾಗಲು ತಪ್ಪಿಸಿಕೊಳ್ಳಲು ಸಾಧ್ಯವಾಯಿತು . ದೊಡ್ಡ ದೇಶ ಭಕ್ತನೂ ವೀರೋಚಿತ ಹೋರಾಟಗಾರನು ಆದ ಬಾಜೀಪ್ರಭುವಿನ ಹೆಸರು ಚರಿತ್ರೆಯಲ್ಲಿ ಅಮರವಾಯಿತು

**ಪ್ರಶ್ನೆಗಳು**:

1. 'ಶಿವಾಜಿಯು'- ಈ ವೇಷದಲ್ಲಿ ತಪ್ಪಿಸಿಕೊಂಡನು:
   ೧) ಸೈನಿಕ ೨) ಮುದುಕ ೩) ಸಾಮಂತ ೪) ಚಕ್ರವರ್ತಿ

2. ದಿಲ್ಲಿ ಚಕ್ರವರ್ತಿಯ ಹೆಸರು:
   ೧) ಸಲಾಬತ್ ಖಾನ್ ೨) ಬಾಜೀಪ್ರಭು ೩) ಔರಂಗಜೇಬ ೪) ಶಿವಾಜಿ

3. ಶಿವಾಜಿಯನ್ನು ಹಿಡಿಯಲು ಬಂದ ಕೋಟೆ:

೧) ಚಿತ್ರದುರ್ಗ ೨) ವಿಶಾಲ್ ಗಢ್ ೩) ರಾಯ ಚೂರು ೪) ಪನ್ಹಾಲದುರ್ಗ

4. ಶಿವಾಜಿ ಮತ್ತು ಅವನ ಅನುಚರರು ತಪ್ಪಿಸಿಕೊಳ್ಳುವುದನ್ನು ನೋಡಿದವನು:

೧) ಗೂಢಾಚಾರ ೨) ಮೊಘಲ್ ರಾಜ ೩ ) ಸಲಾಬತ್ ಖಾನ್ ೪)ಶತ್ರು ಸೇನೆ

5. ಇವನ ಹೆಸರು ಚರಿತ್ರೆಯಲ್ಲಿ ಅಮರವಾಗಿದೆ.:

೧ ) ಶಿವಾಜಿ ೨ ) ಔರಂಗಜೇಬ ೩) ಸಲಾಬತ್ ಖಾನ್ ೪) ಬಾಜೀಪ್ರಭ

**II.(ಅ)ಗದ್ಯಾಂಶವನ್ನು ಓದಿಕೊಂಡು ಕೆಳಗಿನ ಬಹುಆಯ್ಕೆ ಪ್ರಶ್ನೆಗಳಿಗೆ ಉತ್ತರಿಸಿ** **೧X೫ = ೫**

ದೇವರು ಮತ್ತು ಗುರು ಅಕ್ಕಪಕ್ಕದಲ್ಲಿ ನಿಂತಿದ್ದರೆ ಯಾರಿಗೆ ಮೊದಲು ನಮಸ್ಕಾರ ಮಾಡುತ್ತೀರಿ? ಭಾರತೀಯರ ಸಂಸ್ಕೃತಿಯ ಪ್ರಕಾರ ಗುರುವಿಗೆ ಮೊದಲ ಪ್ರಣಾಮ. ಗುರುವಿನ ಮಾರ್ಗದರ್ಶನ ಹಾಗೂ ಸಹಾಯವಿಲ್ಲದೇ ಭಕ್ತನಿಗೆ ದೇವರ ದರ್ಶನ ಅಸಾಧ್ಯ.

ಉತ್ತಮಗುರು ಅಥವಾ ಒಳ್ಳೆಯ ಸಲಹೆಗಾರ ತನ್ನ ಮಹಿಮೆಯಿಂದ ನಿಮ್ಮ ಹಿರಿಮೆಯನ್ನು ಎತ್ತಬಲ್ಲ. ಆದ್ದರಿಂದ ನಿಮ್ಮನ್ನು ವಿದ್ಯಾರ್ಥಿಯೆಂದು ಪರಿಗಣಿಸುವ ಉತ್ತಮ ಗುರು ಅಥವಾ ಹಿತಚಿಂತಕರನ್ನು ಆರಿಸಿಕೊಳ್ಳಿ. ಉತ್ತಮ ಹಿತಚಿಂತಕರು ಸರಿಯಾದ ಮಾರ್ಗದರ್ಶನ ಮಾಡುತ್ತಾರೆ. ಯಾವತ್ತು ಕಲಿಕೆಯಲ್ಲಿ ಆಸಕ್ತಿಯಿರಲಿ, ಗುರುವಿಗೆ ಗೌರವವಿರಲಿ. ಏಕೆಂದರೆ ಗುರುಗಳು ಸದಾ ಆಸಕ್ತಿಯಿಂದ ಕಲಿಯುವ ವಿದ್ಯಾರ್ಥಿಗಳನ್ನು ಇಷ್ಟಪಡುತ್ತಾರೆ. ಉತ್ತಮ ಶಿಕ್ಷಕನು ನಿಮಗೆ ಕುಡಿಯಲು ನೀರು ಕೊಡುವುದಿಲ್ಲ. ನಿಮ್ಮಲ್ಲಿ ನೀರಡಿಕೆಯನ್ನುಂಟು ಮಾಡುತ್ತಾನೆ. ಅಂದರೆ ಜ್ಞಾನದ ದಾಹವನ್ನು ಮಾತ್ರ ತೀಸದೆ,ಇನ್ನೂ ಹೆಚ್ಚು ಕಲಿಯಬೇಕೆಂಬ ಆಸಕ್ತಿಯನ್ನು ಬೆಳೆಸುವಂತೆ ಮಾಡಿ ವಿದ್ಯಾರ್ಥಿಗಳನ್ನು ಪ್ರಯತ್ನಶೀಲರನ್ನಾಗಿ ಮಾಡುವರು. ನೀವೇ ಉತ್ತರಗಳನ್ನು ಕಂಡುಕೊಳ್ಳುವ ಪಥವನ್ನು ನಿಮಗೆ ತೋರಿಸುತ್ತಾನೆ.

ಈ ಸಂದರ್ಭದಲ್ಲಿ ಒಂದು ಕತೆ ನೆನಪಿಗೆ ಬರುತ್ತದೆ. ಒಬ್ಬ ರಾಜನಿದ್ದ ಆತನಿಗೆ ಈ ಸಮಾಜಕ್ಕೆ ಬಹುದೊಡ್ಡ ಕೊಡುಗೆ ನೀಡಿದ ವ್ಯಕ್ತಿಗೆ ಸನ್ಮಾನ ಮಾಡುವ ಆಸೆಯಾಗುತ್ತದೆ. ಆತ ಎಲ್ಲ ರೀತಿಯ ಜನರನ್ನು ಕರೆಸುತ್ತಾನೆ. ವೈದ್ಯರು, ವ್ಯಾಪಾರಿಗಳು, ಕಾರ್ಮಿಕರು, ಉದ್ದಿಮೆದಾರರು, ಸಮಾಜಸೇವಕರು ಹೀಗೆ ಎಲ್ಲ ರಂಗಗಳಲ್ಲಿ ಅಪ್ರತಿಮ ಸಾಧನೆಗೈದ ವ್ಯಕ್ತಿಗಳನ್ನು ತನ್ನ ದರ್ಬಾರಿಗೆ ಬರಮಾಡಿಕೊಳ್ಳುತ್ತಾನೆ. ರಾಜನಿಂದ ಸನ್ಮಾನ ಮಾಡಿಸಿಕೊಳ್ಳಲು ಅವರೆಲ್ಲರೂ ತಮ್ಮ ಸಾಧನೆಗಳ ವಿವರಗಳನ್ನು ಬಿನ್ನವಿಸಿಕೊಳ್ಳುತ್ತಾರೆ. ಆದರೆ ರಾಜನಿಗೆ ಸಂತೃಪ್ತಿಯಾಗುವುದಿಲ್ಲ. ಕೊನೆಗೆ ತುಸು ವಯಸ್ಸಾದ ವ್ಯಕ್ತಿ ರಾಜನ ಬಳಿಗೆ ಹೋಗಿ ವಿನಯಪೂರ್ವಕವಾಗಿ ತಲೆಬಾಗಿ ತಾನು ಶಿಕ್ಷಕನೆಂದು ಪರಿಚಯ ಮಾಡಿಕೊಳ್ಳುತ್ತಾನೆ. ರಾಜನಿಗೆ ಅಮಿತಾನಂದವಾಗುತ್ತದೆ. ತನ್ನ ಸಿಂಹಾಸನದಿಂದ ಉತ್ತರಿಸಿ ಇಳಿದು ಶಿಕ್ಷಕನನ್ನು ಸನ್ಮಾನಿಸುತ್ತಾನೆ. ಈ ಸಮಾಜಕ್ಕೆ ಬಹುದೊಡ್ಡ ಕಾಣಿಕೆ ನೀಡುವವರೆಂದರೆ ಶಿಕ್ಷಕರು. ಸಮಾಜದ ಭವಿಷ್ಯವನ್ನು ನಿರ್ಧರಿಸುವವರೇ ಶಿಕ್ಷಕರು.

**ಪ್ರಶ್ನೆಗಳು:**

1.ಉತ್ತಮ ಹಿತ ಚಿಂತಕರು ನಮಗೆ ಸಹಾಯ ಮಾಡುವ ರೀತಿ

೧. ನಮ್ಮ ಹಿರಿಮೆಯನ್ನು ಎತ್ತಿ ಹಿಡಿದು ೨. ನಮ್ಮನ್ನು ಕಡೆಗಣಿಸಿ

೩. ಕಲಿಸಲು ಆಸಕ್ತಿತೋರದೆ ೪. ಸರಿಯಾದ ಮಾರ್ಗದರ್ಶ ನ ಕೊಟ್ಟು

2.ರಾಜನು ಸನ್ಮಾನ ಮಾಡಿದ್ದು ಇವರಿಗೆ

೧. ಕಾರ್ಮಿಕನಿಗೆ ೨. ವೈದ್ಯರಿಗೆ ೩. ಶಿಕ್ಷಕರಿಗೆ ೪. ಸಮಾಜ ಸೇವಕನಿಗೆ

3.ಭಾರತೀಯ ಸಂಸ್ಕೃತಿಯ ಪ್ರಕಾರ ನಮ್ಮ ಮೊದಲ ಪ್ರಣಾಮ ಇವರಿಗೆ ಮಾಡಬೇಕು.

೧. ವಿದ್ಯಾರ್ಥಿಗೆ ೨. ಗುರುವಿಗೆ ೩. ದೇವರಿಗೆ ೪. ಸಲಹೆಗಾರನಿಗೆ

4.ಶಿಕ್ಷಕರು ಇವರಿಗೆ ದೊಡ್ಡ ಕಾಣಿಕೆ ನೀಡುವರು.

೧. ರಾಜನಿಗೆ ೨. ವಿದ್ಯಾರ್ಥಿಗೆ ೩. ಸಮಾಜಕ್ಕೆ ೪. ವ್ಯಾಪಾರಿಗೆ

5.ಉತ್ತಮ ಗುರು ನಮಗೆ ನೀಡುವುದು ಇದನ್ನು

೧. ಆಸಕ್ತಿ ೨. ಜ್ಞಾನ ೩. ನೀರು ೪. ಪ್ರಯತ್ನ

**ಅಥವಾ**

**ಆ) ಗದ್ಯಾಂಶವನ್ನು ಓದಿಕೊಂಡು ಕೆಳಗಿನ ಬಹುಆಯ್ಕೆ ಪ್ರಶ್ನೆಗಳಿಗೆ ಉತ್ತರಿಸಿ:** ೧X೫ = ೫

ಬಾಲಗಂಗಾಧರ ತಿಲಕರು ಅತ್ಯಂತ ಬುದ್ಧಿವಂತ ವಿದ್ಯಾರ್ಥಿಗಳಾಗಿದ್ದರು. ಅವರ ಸ್ಮರಣಶಕ್ತಿಯು ಅಗಾಧವಾಗಿತ್ತು. ತಂದೆ ಗಂಗಾಧರ ಪಂತರಿಂದ ಸಂಸ್ಕೃತವನ್ನು ಮನೆಯಲ್ಲೇ ಕಲಿತರು. ಸಂಸ್ಕೃತದ ಒಂದು ಶ್ಲೋಕವನ್ನು ಕಂಠಪಾಠ ಮಾಡಿದರೆ ಅವರಿಗೆ ಒಂದು ಪೈಸೆ ಸಿಗುತ್ತಿತ್ತು. ಹೀಗೆ ಅವರಿಗೆ ೨೦೦ ಪೈಸೆಗಳು ಸಿಕ್ಕಿದ್ದವು. ಶಾಲೆಗೆ ಸೇರುವ ಮುನ್ನವೇ ಅವರಿಗೆ ಅನೇಕ ವಿಷಯಗಳ ಜ್ಞಾನ ದೊರಕಿತ್ತು. ಅವರ ಕಂಠಪಾಠದ ಶಕ್ತಿಯನ್ನು ಗಮನಿಸಿ ಅಧ್ಯಾಪಕರು ಆಶ್ಚರ್ಯಚಕಿತರಾಗುತ್ತಿದ್ದರು. ಒಂದು ದಿನ ತರಗತಿಯಲ್ಲಿ ಉಕ್ತಲೇಖನ ಬರೆಯಲು ಹೇಳಿದ್ದರು. ಅದರಲ್ಲಿ 'ಸಂತ' ಈ ಶಬ್ದವು ಆಗಾಗ ಬರುತ್ತಿತ್ತು. ತಿಲಕರು ಅದನ್ನು ದೇವನಾಗರಿ ಲಿಪಿಯಲ್ಲಿ ಮೂರೂ ರೀತಿಯಲ್ಲಿ ಬರೆದಿದ್ದರು. ಗುರುಗಳು ಮೊದಲಿನದು ಸರಿಯಾಗಿದೆ ಉಳಿದೆರಡು ತಪ್ಪು ಎಂದು ಹೇಳಿದರು. ಆಗ ತಿಲಕರು ತಾನು ಬರೆದಿರುವ ಮೂರು ಶಬ್ದಗಳು ಸರಿಯಾಗಿವೆ ಎಂದು ಉದಾಹರಣೆ ಸಹಿತ ಅಧ್ಯಾಪಕರಲ್ಲಿ ತಿಳಿಸಿದಾಗ ಅವರು ನೀನು ಸರಿಯಾಗಿ ಹೇಳಿದೆ ಎಂದು ಒಪ್ಪಿಕೊಂಡರು . ತಿಲಕರು ಮಹಾವಿದ್ಯಾಲಯದಲ್ಲಿ ಬಿ.ಎ. ಪ್ರಥಮ ವರ್ಗದಲ್ಲಿರುವಾಗ ಒಂದು ವರ್ಷ ಪರೀಕ್ಷೆಗೆ ಕೂರದೇ ವ್ಯಾಯಾಮದ ಅಭ್ಯಾಸ ಮಾಡಿ ತಮ್ಮ ಶರೀರವನ್ನು ಸದೃಢಗೊಳಿಸಿದರು. ಅವರು ಶ್ರೇಷ್ಠ ಮಲ್ಲರು ಮತ್ತು ಉತ್ತಮ ಈಜುಗಾರರಾಗಿದ್ದರು. ಶಾಲೆಗೆ ಹೋಗುತ್ತಿರುವಾಗಲೇ ನಮ್ಮ ದೇಶವನ್ನು ಆಂಗ್ಲರು ಆಳುತ್ತಿದ್ದಾರೆಂಬ ಅರಿವು ಅವರಿಗಿತ್ತು. ತಮ್ಮ ಶಿಕ್ಷಣ ಮುಗಿದೊಡನೆ ಆಂಗ್ಲರನ್ನು ಭಾರತದಿಂದ ಓಡಿಸಲು ಅವರು ನಿರಂತರ ಪ್ರಯತ್ನಿಸತೊಡಗಿದರು. ಬಾಲ್ಯದಿಂದಲೇ ಅವರಲ್ಲಿದ್ದ ಸತ್ಯ, ಛಲ, ಸ್ವಾಭಿಮಾನದಂತಹ ಉತ್ತಮ ಗುಣಗಳು ಆಂಗ್ಲರ ವಿರುದ್ಧದ ಹೋರಾಟದಲ್ಲಿ ಉಪಯೋಗಕ್ಕೆ ಬಂದವು. ಶರೀರ ಪುಷ್ಟಿಯಾದುದರಿಂದ ಕಾರಾಗೃಹದಲ್ಲಿನ ಕೆಟ್ಟ ಪರಿಸ್ಥಿತಿಯನ್ನು ಎದುರಿಸಲು, ರಾಜಕೀಯ ಹೋರಾಟದಲ್ಲಿ ಏರುಪೇರುಗಳನ್ನು ಸಹಿಸಲು ಸಾಧ್ಯವಾಯಿತು. ಮಂಡಾಳೆಯ ಕಾರಾಗೃಹದಲ್ಲಿ 'ಗೀತಾರಹಸ್ಯ'ವನ್ನು ಬರೆದರು.

ವಿದ್ಯಾರ್ಥಿಯಾಗಿರುವಾಗಲೇ ಕರಗತವಾಗಿದ್ದ ಸತ್ಯಕ್ಕಾಗಿ ಛಲ ಮತ್ತು ಸ್ವಾಭಿಮಾನದ ಗುಣಗಳಿಂದಲೇ ಅವರು ಹಿಂದುಸ್ಥಾನದಲ್ಲಿ ಅನ್ಯಾಯ ಎಸಗುತ್ತಿರುವ ಆಂಗ್ಲರ ವಿರುದ್ಧ ಹೋರಾಡಲು ಶಕ್ತರಾದರು. ಲೋಕಮಾನ್ಯ ಬಾಲ ಗಂಗಾಧರ ತಿಲಕರು ಭಾರತದ ಆದರ್ಶ ಪುತ್ರರೆಂದು ಗೌರವಿಸಲ್ಪಡುತ್ತಿದ್ದಾರೆ.

**ಪ್ರಶ್ನೆಗಳು**:

1.ತಿಲಕರು ಗೀತಾರಹಸ್ಯವನ್ನು ಬರೆದ ಜಾಗ –

೧. ಮನೆಯಲ್ಲಿ ೨. ಕಾರಾಗೃಹದಲ್ಲಿ ೩. ಶಾಲೆಯಲ್ಲಿ ೪. ಹೋರಾಟದಲ್ಲಿ

2. ಒಂದು ಶ್ಲೋಕ ಕಂಠಪಾಠ ಮಾಡಿ ಹೇಳಿದರೆ ಸಿಗುತ್ತಿದ್ದದ್ದು

೧. ಇನ್ನೂರುಪೈಸೆ ೨. ಇನ್ನೂರು ರುಪಾಯಿ ೩. ಒಂದು ಪೈಸೆ ೪. ನೂರು ಪೈಸೆ

3. ತಿಲಕರು ಮನೆಯಲ್ಲಿ ಕಲಿತ ಭಾಷೆ ಇದು

೧. ಕನ್ನಡ ೨. ಸಂಸ್ಕೃತ ೩. ತೆಲುಗು ೪. ಆಂಗ್ಲ

4. ಶರೀರವನ್ನು ಸದೃಢವಾಗಿ ಇಟ್ಟುಕೊಳ್ಳಲು ತಿಲಕರು ಇದನ್ನು ಮಾಡುತ್ತಿದ್ದರು

೧. ವ್ಯಾಯಾಮ ೨. ಹಿತವಾದ ಊಟ ೩. ಧ್ಯಾನ ೪. ಯೋಗಾಸನ

5. ಗುರುಗಳು ಕೊಟ್ಟ ಉಕ್ತಲೇಖನದಲ್ಲಿ ಮತ್ತೆ ಮತ್ತೆ ಬಂದ ಪದವು ಇದಾಗಿತ್ತು.

೧. ಲಿಪಿ ೨. ಸಂತ ೩. ಆದರ್ಶ ೪. ಶ್ಲೋಕ

## ಅನ್ವಯಿಕ ವ್ಯಾಕರಣ-16 ಅಂಕಗಳು

**III.ಕೆಳಗಿನ ಪ್ರತಿಯೊಂದು ಪ್ರಶ್ನೆಗೂ ನಾಲ್ಕು ಉತ್ತರಗಳನ್ನು ಕೊಡಲಾಗಿದೆ ಅವುಗಳಲ್ಲಿ ಸರಿಯಾದ ಪದವನ್ನು ಆರಿಸಿ ಬರೆಯಿರಿ: (೪ ಕೈಮಾತ್ರ)** ೧X೪ =೪

1. 'ಅಣ್ಮ' ಈಪದದ ಸಮಾನಾರ್ಥ ಪದ.

೧. ಬಡೆಯ ೨. ಒಡೆಯ ೩. ಇಡಿಯ ೪. ಕಡೆಯ

2. ' ಅಧಿಕೃತ' – ಈ ಪದದ ವಿರುದ್ಧಾರ್ಥ ಪದ..

೧. ಅರಧಿಕೃತ ೨. ನಿರಧಿಕೃತ ೩. ಸಾಧಿಕೃತ ೪. ಅನಧಿಕೃತ

3. ' ಕಾವ್ಯ' ಈ ಪದದ ತದ್ಭವ ರೂಪ

೧. ಕಾಯ್ವ ೨. ಕಗ್ಗ ೩. ಕಬ್ಬ ೪. ಕವನ

4. ಸೀತಾ ಭರ್ಜರಿ ಊಟ ಮಾಡುತ್ತಿದ್ದಾಳೆ . ಈ ವಾಕ್ಯದಲ್ಲಿರುವ ಕ್ರಿಯಾಪದ ಇದಾಗಿದೆ.

೧. ಮಾಡುತ್ತಿದ್ದಾಳೆ ೨. ಭರ್ಜರಿ ೩. ಊಟ ೪. ಸೀತಾ

5. ' ಮೃಷ್ಟಾನ್ನ' ಪದವು ಈ ಸಂಧಿಗೆ ಉದಾಹರಣೆ ಆಗಿದೆ.

**೧. ಯಣ್ ಸಂಧಿ ೨. ಸವರ್ಣದೀರ್ಘ ಸಂಧಿ ೩. ವೃದ್ಧಿ ಸಂಧಿ ೪. ಗುಣಸಂಧಿ**

**IV.ಕೆಳಗಿನ ಪ್ರತಿಯೊಂದು ಪ್ರಶ್ನೆಗೂ ನಾಲ್ಕು ಉತ್ತರಗಳನ್ನು ಕೊಡಲಾಗಿದೆ ಅವುಗಳಲ್ಲಿ ಸರಿಯಾದ ಪದವನ್ನುಆರಿಸಿ ಬರೆಯಿರಿ: (೪ ಕೈಮಾತ್ರ)** **೧X೪ =೪**

1. 'ಸಖಿ ' ಈ ಪದದ ಪುಲ್ಲಿಂಗ ಪದ.
   ೧. ಸುಖ ೨. ಸಖ ೩. ಸಖಿನಿ ೪. ಸಖೆ
2. ' ದಾರಿಯಲ್ಲಿ ಮಂಗ ಕಾಣಿಸಿತು.' ಗೆರೆ ಎಳೆದ ಪದದ ವಿಭಕ್ತಿ ತಿಳಿಸಿ.
   ೧. ಚತುರ್ಥೀ ೨. ಪಂಚಮೀ ೩.ದ್ವಿತೀಯಾ ೪. ಸಪ್ತಮೀ
3. ' ಮನೆಯ ಬಳಿ ಕಸ ಕಡ್ಡಿ ಗಳು ಬಿದ್ದಿವೆ'. ಈ ವಾಕ್ಯದಲ್ಲಿ ಗೆರೆ ಎಳೆದ ಪದವು ಇದಾಗಿದೆ.
   ೧. ಅನುಕರಣಾವ್ಯಯ ೨. ದ್ವಿರುಕ್ತಿ ೩. ಜೋಡುನುಡಿ ೪. ನುಡಿಗಟ್ಟು
4. **'ನಮ್ಮ ಮನೆಗೆ ಗೆಳೆಯರು ಬಂದರು'**. ಈ ವಾಕ್ಯದಲ್ಲಿರುವ ಸರ್ವನಾಮಪದ ____
   ೧. ಬಂದರು ೨.ನಮ್ಮ ೩. ಗೆಳೆಯರು ೪. ಮನೆಗೆ
5. **'ನಾನು ದೇವಾಲಯದ ಬಳಿ ಕುಂಟನನ್ನು ನೋಡಿದೆ'**.ಈ ವಾಕ್ಯದಲ್ಲಿ ಗೆರೆ ಎಳೆದ ಪದವು ಇದಾಗಿದೆ.
   ೧. ರೂಢನಾಮ ೨.ಅಂಕಿತನಾಮ ೩. ಅನ್ವರ್ಥನಾಮ ೪. ಸರ್ವನಾಮ

**V.ಕೆಳಗಿನ ಪ್ರತಿಯೊಂದು ಪ್ರಶ್ನೆಗೂ ನಾಲ್ಕು ಉತ್ತರಗಳನ್ನು ಕೊಡಲಾಗಿದೆ ಅವುಗಳಲ್ಲಿ ಸರಿಯಾದ ಪದವನ್ನುಆರಿಸಿ ಬರೆಯಿರಿ: (೪ ಕೈಮಾತ್ರ)** **೧X೪ =೪**

1. '**ಶಿಷ್ಯ**' ಈ ಪದದ ಬಹುವಚನ ರೂಪ.
   ೧. ಶಿಷ್ಯಯಂದಿರು ೨. ಶಿಷ್ಯಗಳು ೩. ಶಿಷ್ಯಯು ೪. ಶಿಷ್ಯಯರು
2. 'ಹಾವು ಸರಸರನೆ ಪೊದೆಯೊಳಗೆ ಹೋಯಿತು.'- ಈ ವಾಕ್ಯದಲ್ಲಿರುವ ಅನುಕರಣಾವ್ಯಯ ಇದಾಗಿದೆ.
   ೧. ಹಾವು ೨. ಸರಸರ ೩. ಪೊದೆಯೊಳಗೆ ೪. ಹೋಯಿತು
3. ನಾಯಿ ಬೆಕ್ಕು ಹಸು ಇವೆಲ್ಲವೂ ಸಾಕು ಪ್ರಾಣಿಗಳು- ಈ ವಾಕ್ಯದಲ್ಲಿ ಇರಬೇಕಾದ ಲೇಖನಚಿಹ್ನೆ
   ೧. ಉದ್ಧರಣ ೨. ಅರ್ಧವಿರಾಮ ೩. ಭಾವಸೂಚಕ ೪. ಅಲ್ಪವಿರಾಮ
4. 'ಅಕ್ಕ ಓದಿದಳು.' ಈ ವಾಕ್ಯವನ್ನು ವರ್ತಮಾನ ಕಾಲಕ್ಕೆ ಬದಲಿಸಿದರೆ.
   ೧. ಅಕ್ಕ ಓದುವಳು ೨. ಅಕ್ಕ ಓದುತ್ತಾಳೆ ೩. ಅಕ್ಕ ಓದಲಿ ೪. ಅಕ್ಕ ಓದಬಹುದು
5. 'ಕಾಮ, ಕ್ರೋಧ, ಧನ, ಲೋಭ ಈ ಪದಗಳಲ್ಲಿ ಗುಂಪಿಗೆ ಸೇರದಿರುವುದು.
   ೧. ಲೋಭ ೨. ಕಾಮ ೩. ಕ್ರೋಧ ೪. ಧನ

**VI.ಕೆಳಗಿನ ಪ್ರತಿಯೊಂದು ಪ್ರಶ್ನೆಗೂ ನಾಲ್ಕು ಉತ್ತರಗಳನ್ನು ಕೊಡಲಾಗಿದೆ ಅವುಗಳಲ್ಲಿ ಸರಿಯಾದ ಪದವನ್ನುಆರಿಸಿ ಬರೆಯಿರಿ:** **೧X೪ =೪**

1. ' ತಾನೆಲ್ಲಿ ' ಈ ಪದವನ್ನು ಬಿಡಿಸಿದಾಗ ಆಗುವ ರೂಪ:
   ೧.ತಾ+ಎಲ್ಲಿ ೨. ತಾನ + ಎಲ್ಲಿ ೩. ತಾನು + ಎಲ್ಲಿ ೪. ತಾನೆ +ಲ್ಲಿ
2. ತಂದೆ' ಈ ಪದದ ನಾನಾರ್ಥ ಇದಾಗಿದೆ.
   ೧. ಅಪ್ಪ- ತರುವುದು ೨. ಅಣ್ಣ - ತರುವುದು
   ೩. ಅಪ್ಪ - ಹೋಗುವುದು ೪. ಅಪ್ಪ- ಬರುವುದು
3. 'ಹುಲ್ಲುಗಾವಲು ' ಈ ಪದವನ್ನು ಯಾವ ಸಂಧಿಗೆ ಉದಾಹರಿಸಬಹುದು.
   ೧. ಲೋಪ ಸಂಧಿ ೨. ಆಗಮ ಸಂಧಿ ೩. ಆದೇಶ ಸಂಧಿ ೪. ಗುಣ ಸಂಧಿ
4. 'ಮನೆಯೆ ಮೊದಲ' __ಈ ಗಾದೆಯ ಮುಂದಿನ ಭಾಗ:
   ೧. ಪಾಠಶಾಲೆ ೨. ನಾಟ್ಯಶಾಲೆ ೩. ಪಾಕ ಶಾಲೆ ೪. ಆಟ ಶಾಲೆ

## ಬಹು ಆಯ್ಕೆ ಪ್ರಶ್ನೆ – ಪಠ್ಯಗಳ ಅಧ್ಯಯನ 10 ಅಂಕಗಳು

**VII. ಕೆಳಗಿನ ಪ್ರತಿಯೊಂದು ಪ್ರಶ್ನೆಗೂ ನಾಲ್ಕು ಉತ್ತರಗಳನ್ನು ಕೊಡಲಾಗಿದೆ. ಅವುಗಳಲ್ಲಿ ಸರಿಯಾದ ಉತ್ತರವನ್ನುಆರಿಸಿ ಬರೆಯಿರಿ:** ೧X೪ = ೪

೧. ಪರಮೇಶ್ವರ ಮತ್ತು ಶಾಂಭವಿ ತನ್ನ ತಂದೆ -ತಾಯಿ ಎಂದು ಹೇಳಿದವರು. .

೧. ರಾವಣ ೨. ನಾರದ ೩. ಪಶುಪತಿ ೪.ವಟು

೨. ಲೇಖಕರು ಆಟೋದವನಿಗೆ ಹೋಗಲು ಹೇಳಿದ ಕಾಲೇಜು.

೧. ವಿಜಯಾ ಕಾಲೇಜು ೨. ಆರ್. ವಿ ಕಾಲೇಜು

೩. ಸಿಂಧಿ ಕಾಲೇಜು ೪.ನ್ಯಾಷನಲ್ ಕಾಲೇಜು

೩. ಬೂದಿಯನ್ನು ಗಾಳಿಯಲ್ಲಿ ತೂರಿ ಬಿಟ್ಟರೆ ಇಲ್ಲಿ ಹೋಗಿ ಬೀಳುತ್ತದೆ.

೧. ಗೋಧಿಯ ಹೊಲದಲ್ಲಿ ೨. ಭತ್ತದ ಗದ್ದೆಯಲ್ಲಿ

೩. ರಾಗಿ ಹೊಲದಲ್ಲಿ ೪. ಜೋಳದ ಹೊಲದಲ್ಲಿ

೪. ಕವಿಗಳು ನಮ್ಮೆದೆಯ ಕಾಮಧೇನು ಎಂದು ಕರೆಯುವುದು ಇದನ್ನೇ

೧. ಕನಸುಗಳು ೨. ಮೆಟ್ಟಿಲುಗಳು ೩. ಸಾಗರಗಳು ೪. ಕೋಟೆಗಳು

**VIII. ಈ ಪಠಿತ ಗದ್ಯ ಭಾಗವನ್ನುಓದಿ ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರಿಸಿ.** ೧×೫=೫

೧೯೫೮ನೆಯ ಇಸವಿ ಅಕ್ಟೋಬರ್ ತಿಂಗಳು ಮಂಗಳವಾರ ೨೧ನೆಯ ತಾರೀಖು , ಶಿವನಸಮುದ್ರದ ಪ್ರವಾಸಿಗರ ನಿಲ್ ಮನೆಯಲ್ಲಿ ಕುಳಿತುಕೊಂಡು ಈ ದಿನದ ಪಯಣದ ವಿವರ ಬರೆಯುತ್ತಿದ್ದೇನೆ. ಈಗ ರಾತ್ರಿ ಹನ್ನೆರಡು ಹೊಡೆದು ಹದಿನೈದು ನಿಮಿಷವಾಗಿದೆ. ಸುತ್ತಣ ಲೋಕವೆಲ್ಲ ಮಲಗಿಕೊಂಡಿದೆ . ನನ್ನ ಬಳಿ ಈ ತಂಗು ಮನೆಯಲ್ಲಿ ನನ್ನ ಗೆಳೆಯರು, ಕನ್ನಡ ಯಾತ್ರಿಕರು ಮಲಗಿಕೊಂಡಿದ್ದಾರೆ. ಇಂದು ದಿನವೆಲ್ಲ ಅಲೆದು ಅಲೆದು ಅವರು ದಣಿದು ನಿದ್ರೆ ಹೋಗಿದ್ದಾರೆ.

ಶಿವನಸಮುದ್ರವನ್ನು ಒಳಸೇರುವ ಮುನ್ನ ಬಾಗಿಲ ಬಳಿ ನಿಂತ ಸುಬ್ರಹ್ಮಣ್ಯಮ್ ನಮ್ಮನ್ನು ವಿಶ್ವಾಸದಿಂದ ಸ್ವಾಗತಿಸಿದರು . ನಿಲ್ಮನೆಯನ್ನು ಕೂಡಲೆ ಖಾಲಿ ಮಾಡಿಸಿದರು . ಹಾಸಿಗೆ ಹಾಸಿಕೊಟ್ಟರು . ಊಟ ಉಪಚಾರದ ಬಗೆಗೆ ಕೇಳಿದರು. ಕೊನೆಗೆ ಹೋಗುವಾಗ 'ಗುಡ್ ನಾಯಿಟ್' ಅಂದರು . ಸುಬ್ರಹ್ಮಣ್ಯಮ್ ನೌಕರ ನೇನೋ ಅಹುದು . ಆದರೆ ಅವರಿತ್ತ ಸ್ವಾಗತ, ವಿಶ್ವಾಸದ ನುಡಿ ನೆನೆದರೆ ನಾವು ಸುಬ್ರಹ್ಮಣ್ಯಮ್ ನಿಗಿಂತ ಸಣ್ಣವರು ಎನ್ನುವಲ್ಲಿ ಸಂದೇಹವಿಲ್ಲ.

ತಲಕಾಡಿನ ಇತಿಹಾಸದಲ್ಲಿ ಗಂಗರ ಇತಿಹಾಸ, ಜೈನಧರ್ಮದ ವಿವರಣೆ ಇದೆ . ಕನ್ನಡ ಸಾಹಿತ್ಯದ ಕಥನವಿದೆ. ಹೊಯ್ಸಳ ವಾಸ್ತುಶಿಲ್ಪದ ವಿವರಣೆ ಇದೆ. ಎಲ್ಲಕ್ಕೂ ಮಿಗಿಲಾಗಿ ಕನ್ನಡವೇ ಧರ್ಮ, ಕನ್ನಡವೇ ಬಾಳಿನ ಪರಿಪೂರ್ಣತೆಯೆಂದು ಬಗೆದು ಅದಕ್ಕಾಗಿ ಹೋರಾಡಿ ದುಡಿದ ವೀರರ ಉಜ್ವಲ ಚರಿತ್ರೆ ಇದೆ . ಗಂಗರ ರಾಜ್ಯ ಗಂಗವಾಡಿ ಎಂದು ಹೆಸರಾಗಿದೆ. ಅವರ ಮೊದಲ ರಾಜ್ಯಧಾನಿ ಕೋಲಾರ . ಸುಮಾರು ಕ್ರಿ.ಶ .೫00ರ ಹೊತ್ತಿಗೆ ಕೋಲಾರದಿಂದ ಹರಿವರ್ಮ ರಾಜಧಾನಿಯನ್ನು ತಲಕಾಡಿಗೆ ತಂದನು. ಅಲ್ಲಿಂದ ಮುಂದಕ್ಕೆ ಐದು ಶತಮಾನಗಳವರೆಗೆ ಅಂದರೆ ಹತ್ತನೆಯ ಶತಮಾನದವರೆಗೂ ಗಂಗರು ಆಳ್ವಿಕೆ ನಡೆಸಿದರು.

1.ಹನ್ನೆರಡು ಹೊಡೆದು ಹದಿನೈದು ನಿಮಿಷವಾಗಿದೆ ಎಂದರೆ ಆಗಿನ ಸಮಯ------

೧) ೧೨:೧೫ ೨) ೧೨:೫೧ ೩) ೧೨:೨೫ ೪)೧೨:೦೫

2. ಲೇಖಕರಿಗೆ ಹಾಸಿಗೆ ಹಾಸಿ ಉಪಚಾರ ಮಾಡಿದವರು-----

೧ ) ಬಾಲಸುಬ್ರಹ್ಮಣ್ಯಮ್ ೨) ಸುಬ್ರಹ್ಮಣ್ಯಮ್ ಶಾಸ್ತ್ರಿ

೩) ಸುಬ್ರಹ್ಮಣ್ಯಮ್ ೪) ಸುಬ್ರಹ್ಮಣ್ಯಮ್ ಈಶ್ವರನ್

3. ತಲಕಾಡಿನ ಇತಿಹಾಸದಲ್ಲಿ ಈ ಧರ್ಮದ ವಿವರಣೆ ಇದೆ.

೧) ಬೌದ್ಧ ಧರ್ಮ ೨)ಜೈನ ಧರ್ಮ ೩) ಇಸ್ಲಾಂ ಧರ್ಮ ೪)ಕ್ರೈಸ್ತ ಧರ್ಮ

4. ಗಂಗರ ಮೊದಲ ರಾಜಧಾನಿ---

೧) ತಲಕಾಡು ೨) ಗಂಗವಾಡಿ ೩) ಶಿವನಸಮುದ್ರ ೪)ಕೋಲಾರ

5. ಗಂಗರು ಕ್ರಿಶ ೫00 ರಿಂದ ಮುಂದಕ್ಕೆ ---- ಶತಮಾನಗಳವರೆಗೆ ಆಳ್ವಿಕೆ ನಡೆಸಿದರು.

೧ ) ಮೂರು ೨)ಐದು ೩) ಹತ್ತು ೪)ಐನೂರು

**IX ಈ ಪಠಿತ ಪದ್ಯ ಭಾಗವನ್ನು ಓದಿ ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರಿಸಿ:** ೧×೫=೫

೧) "ಕುಹೂ ! ಕುಹೂ! "– ಕೋಕಿಲವಾಣಿ !
ಜಗ ಜುಮ್ಮೆಂದುದು ಅದ ಕೇಳಿ!
ನೀರವ ಪರ್ವತ ಕಾನನ ಶ್ರೇಣಿ
ಮರುದನಿಗೈದಿತು ಮುದ ತಾಳಿ.
ಗಾನವ ಕೇಳಿ ಮಹಾಂಬರ ಸುಮ್ಮನೆ
ಮಾತಾಡದೆ ಬಣ್ಣಿಸುತಿತ್ತು!
ಕಂದರದಲ್ಲದ್ದೊಂದು ಸರೋವರ
ತೆರೆಗಳ ಕೈಪರೆಯಿಕ್ಕಿತ್ತು!
ಮಾಧುರ್ಯದಿ ಪಿಕ ತನ್ನನೆ ಮರೆಯುತೆ
'ಕುಹೂ!ಕುಹೂ!" ಕೂಗಿತ್ತು!

೨) ಆಲಿಸಿದೊರ್ವನು ಗಾನಕೆ ನೊಂದು
ಸೂಚನೆ ಕೊಟ್ಟನು ಇಂತೆಂದು :--
"ಮಲೆಗಳಲುಲಿಯುವ ಓ ಕೋಗಿಲೆಯೇ
ಬಲು ಚೆಲುವಿದೆ ನಿನ್ನೀ ಗಾನ!
ಇಂಗ್ಲೀಷಿಗೆ ತರ್ಜುಮೆ ಮಾಡಿದರೆ
ದೊರೆವುದು ನೋಬೆಲ್ ಬಹುಮಾನ!
ಅರಣ್ಯ ರೋಧನ! ಸುಮ್ಮನೆ ಹಾಡುವೆ
ಕೇಳುವರಾರಿಲ್ಲಿ?
ಕೂಗಿತು ಕೋಗಿಲೆ " ಕುಹೂ" ಎಂದು!
ತಲ್ಲಣಿಸಿತು ಜಗ ಜುಮ್ಮೆಂದು!

**ಪ್ರಶ್ನೆಗಳು**:

1. ಜಗತ್ತು ಜುಮ್ಮೆಂದುದು ಇದರ ಹಾಡಿಗೆ
   ೧. ಕಾಗೆಯ ೨. ಗಿಣಿಯ ೩. ಪರ್ವತದ ೪. ಕೋಗಿಲೆಯ
2. ಕಾಡು ಮತ್ತು ಪರ್ವತ ಹಾಡನ್ನು ಕೇಳಿ ಸಂತೋಷದಿಂದ ಹೀಗೆ ಉತ್ತರಿಸಿದವು.
   ೧. ಪ್ರತಿಧ್ವನಿಯ ಮಾಡಿ ೨.ನೀರವದಿಂದ
   ೩.ಮಾಧುರ್ಯದಿಂದ ೪. ಚಪ್ಪಾಳೆಯಿಂದ
3. ಗಾನವನ್ನು ಕೇಳಿ ಸುಮ್ಮನಿದ್ದದ್ದು ಇದಾಗಿದೆ.
   ೧. ಕಾನನ ೨. ಮಹಾಂಬರ ೩. ಸರೋವರ ೪. ಕಂದರ
4. ಹಕ್ಕಿಯ ಗಾನವನ್ನು ಈ ಭಾಷೆಗೆ ತರ್ಜುಮೆ ಮಾಡಬಹುದು ಎಂದರು ಕವಿ.
   ೧. ಸಂಸ್ಕೃತಕ್ಕೆ ೨. ಹಿಂದಿಗೆ ೩.ಇಂಗ್ಲೀಷಿಗೆ ೪. ತಮಿಳಿಗೆ
5. ಹಕ್ಕಿಯ ಗಾನಕ್ಕೆ ಸಿಗಬೇಕಾದ ಪ್ರಶಸ್ತಿ ಇದಾಗಿದೆ.
   ೧. ಪದ್ಮಶ್ರೀ ೨. ನೋಬೆಲ್ ೩.ಭಾರತ ರತ್ನ ೪. ಪದ್ಮಭೂಷಣ

## ಭಾಗ - B ಅಂಕಗಳು : 40

## ಬರವಣಿಗೆಕೌಶಲ್ಯ

**X. ನೀವು ಬೇಸಿಗೆ ರಜೆಯನ್ನು ಹೇಗೆ ಕಳೆಯಬೇಕೆಂದು ಕೊಂಡಿರುವಿರಿ ಎಂದು ತಿಳಿಸುತ್ತಾ ನಿಮ್ಮ ತಾಯಿಗೆ ಒಂದು ಪತ್ರ ಬರೆಯಿರಿ.** ೪x೧=೪

**XI.ಕೆಳಗಿನ ವಿಷಯಗಳಲ್ಲಿ ಯಾವುದಾದರೂ ಒಂದು ವಿಷಯವನ್ನು ಕುರಿತು 150 ಪದಗಳಿಗೆ ಮೀರದಂತೆ ಪ್ರಬಂಧ ಬರೆಯಿರಿ .** ೪x೧=೪

೧. ಜಲಮಾಲಿನ್ಯ
೨. ನೀವು ಆಚರಿಸಿದ ಯಾವುದಾದರೊಂದು ಧಾರ್ಮಿಕ ಹಬ್ಬ
೩. ಕ್ರೀಡೆಗಳ ಮಹತ್ವ

**XII.ಸುಳಿವು ಪದಗಳ ಸಹಾಯದಿಂದ ಕಥೆಯನ್ನು ಪೂರ್ಣಗೊಳಿಸಿ:** ೧/೨x೮=೪

(ಆಜಾದ್ ಹಿಂದ್‌ಫೌಜ್, ಪ್ರಭಾವತಿ, ನೇತಾಜಿ, ಸಹಾಯಕ, ಒರಿಸ್ಸಾ,
ಬಾಲಾಜಿ, ಬುದ್ಧಿವಂತ, ವಿಮಾನ, ಐ.ಪಿ.ಎಸ್, ಬ್ರಿಟಿಷರ)

ಭಾರತದ ಸ್ವಾತಂತ್ರ್ಯ ಹೋರಾಟದ ಇತಿಹಾಸದಲ್ಲಿ ಸುಭಾಷ್ ಚಂದ್ರ ಬೋಸರ ಹೆಸರು ಚಿರಸ್ಮರಣೀಯ. ಇವರು _______ ದ ಕಟಕ್ ನಗರದಲ್ಲಿ ಜನಿಸಿದರು. ಇವರ ತಂದೆ ಜಾನಕೀನಾಥ ಬೋಸ್ ತಾಯಿ _______. ಸುಭಾಷ್

ಬಾಲ್ಯದಿಂದಲೂ ತುಂಬಾ __________ರಾಗಿದ್ದು, ಎಲ್ಲಾ ಪರೀಕ್ಷೆಗಳಲ್ಲೂ ಪ್ರಥಮ ಶ್ರೇಣಿ ಪಡೆದರು. ನಂತರ __________ ಪರೀಕ್ಷೆ ಬರೆಯಲು ಇಂಗ್ಲೆಂಡಿಗೆ ಹೋಗಿ ನಾಲ್ಕನೇ ಶ್ರೇಣಿಯಲ್ಲಿ ಉತ್ತೀರ್ಣರಾದರು. __________ ವಿರುದ್ಧ ಹೋರಾಡಲು ಯುವ ಪಡೆ ಕಟ್ಟಿ ಅದಕ್ಕೆ __________ ಎಂದು ಹೆಸರಿಟ್ಟರು. ಸಾವಿರಾರು ಜನ ಇವರ ಸೈನ್ಯಕ್ಕೆ ಸೇರಲು ಸಿದ್ಧರಾದರು. ಆದರೆ ೧೯೪೫ರಲ್ಲಿ ನಡೆದ ________ ಅಪಘಾತದಲ್ಲಿ ಇವರು ನಿಧನರಾದರು. ಇವರನ್ನು ಭಾರತೀಯರು ಪ್ರೀತಿಯಿಂದ __________ ಎಂದು ಕರೆಯುವರು.

**ಪದ್ಯಗಳಅಧ್ಯಯನ – ಅಂಕಗಳು : 28**

**XIII.ಈ ಕೆಳಗಿನಪ್ರಶ್ನೆಗಳಿಗೆ ೧-೨ ವಾಕ್ಯಗಳಲ್ಲಿಉತ್ತರಿಸಿ :-** **೧x೪=೪**

1. ಯಶೋಧರೆಯ ಆಂತರ್ಯದಲ್ಲಿರುವ ಸಂದೇಹವೇನು?
2. ಗೆಳೆತನದಲ್ಲಿ ಯಾವ ದುರ್ಗುಣಗಳು ಇಲ್ಲವೆಂದು ಹೇಳಲಾಗಿದೆ?
3. ಕವಿ ಯಾರಿಗೆ ವೀಳೆಯವನು ಕೊಡುವೆ ನಿಂದಿದ್ದಾರೆ?
4. ಲೇಖಕರಿಗೆ ವಿಮಾನಯಾನದ ಬಗ್ಗೆ ಭಯವಿಲ್ಲವೇಕೆ?

**XIV.ಈಕೆಳಗಿನಪ್ರಶ್ನೆಗಳಿಗೆ ೫-೬ ವಾಕ್ಯಗಳಲ್ಲಿ ಉತ್ತರಿಸಿ :-** **೨x೧=೨**

1. ದುಡ್ಡಿಲ್ಲದೇ ಕುಡಿಯುಬಲ್ಲ ನೀರು ಸಿಗುತ್ತಿದ್ದ ಕಾಲದ ಬಗ್ಗೆ ಲೇಖಕರ ಅಭಿಪ್ರಾಯವೇನು?
2. ಶ್ರೇಷ್ಠ ಮಂತ್ರಿಯಲ್ಲಿರ ಬೇಕಾದ ಲಕ್ಷಣಗಳೇನು?

**XV. ಈ ಕೆಳಗಿನ ಸಂದರ್ಭವನ್ನು ಸ್ವಾರಸ್ಯದೊಡನೆ ವಿವರಿಸಿ :-** **೩x೨=೬**

**1** . "ನೀನು ಉತ್ಸವಕ್ಕೆ ಹೋಗುವುದಿಲ್ಲವೇ?"

**ಅಥವಾ**

"ಸೋದರಿಯ ಸುತೆಯಂದು ಎಳೆತನದಲೆ ನನ್ನ ಕರೆತಂದು ಸಾಕಿದಿರಿ"

**2** . "ಭಾಷೆ ಬೇರೆ ಭಾವವೊಂದು"

**ಅಥವಾ**

" ಖಗ ಮೃಗೋರಗಾಳಿಯೋ "

**XVI. ಈ ಕೆಳಗಿನ ಪ್ರಶ್ನೆಗಳಿಗೆ ೮-೧೦ ವಾಕ್ಯಗಳಲ್ಲಿಉತ್ತರಿಸಿ:-** **೪x೧=೪**

**1.** ರಹೀಮನಿಗೆ ಮಗ್ಗದ ಬಗ್ಗೆ ದ್ವೇಷ ಬರಲು ಕಾರಣವೇನು **?**

**ಅಥವಾ**

ಶತ್ರುಘ್ನಾದ್ಯರನ್ನು ಅರಣ್ಯಕನು ಸತ್ಕರಿಸಿದ ವಿಚಾರದಲ್ಲಿ ಮುದ್ದಣ ಮನೋರಮೆಯರ ಮಧ್ಯೆ ನಡೆದ ಸಂಭಾಷಣೆಯನ್ನು ನಿಮ್ಮ ಮಾತುಗಳಲ್ಲಿ ಬರೆಯಿರಿ

**XVII.ಈ ಕೆಳಗಿನ ಪ್ರಶ್ನೆಗಳಿಗೆ 8-10 ವಾಕ್ಯಗಳಲ್ಲಿ ಉತ್ತರಿಸಿ :-** **೪x೧=೪**

1. ವಚನಾಮೃತ ಪದ್ಯದಲ್ಲಿ ವ್ಯಕ್ತವಾಗಿರುವ" ಕಾಯಕತತ್ವದ " ಮಹತ್ವವನ್ನು ವಿವರಿಸಿ.

**ಅಥವಾ**

ಶ್ರೀರಾಮನು ನರದಲಗ ಹಾಗೂ ವಿಹಿಯನ್ನು ಸೆರೆಮನೆಗೆ ಹಾಕಲು ಕಾರಣವೇನು?

********************